ದಿನಾಂಕಃ 18-04-2024 ರಂದು ಪಿಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ ಡಿಟಿಬಿ ವಕೀಲರಿಂದ:

1. ನನ್ನ ತಂದೆಯ ಪೂರ್ಣ ಹೆಸರು ಕೆಂಚಪ್ಪ ತಂದೆ ಸತ್ಯಪ್ಪ ಕಡಪಟ್ಟಿ ಇರುತ್ತದೆ. ಸತ್ಯಪ್ಪ ತಂದೆ ರಾಮಪ್ಪ ಕಡಪಟ್ಟಿ ನನ್ನ ಖಾಸಾ ಕಾಕಾ (ಚಿಕ್ಕಪ್ಪ) ಇರುತ್ತಾರೆ. ನನ್ನ ತಂದೆ ಕೆಂಚಪ್ಪ ಇವರಿಗೆ ಮೂರು ಜನ ಹೆಂಡತಿಯರು ಇದ್ದು, ಅವರ ಪೈಕಿ ಮೊದಲನೆಯ ಹೆಂಡತಿಯ ಹೆಸರು ನಿಡೋಣಿ ಮನೆತನದ ಸಿದ್ದವ್ವ, 2 ನೇ ಹೆಂಡತಿಯ ಹೆಸರು ಕುಂಬಳೆವರ ಮನೆತನದ ಸಿದ್ದವ್ವ ಮತ್ತು 3 ನೇ ಹೆಂಡತಿಯ ಹೆಸರು ಶಿಬಾಯಿ ಇರುತ್ತದೆ. ಸದರಿ ಕೆಂಚಪ್ಪ ಇವರ ಮೊದಲನೆಯ ಹೆಂಡತಿ ಸಿದ್ದವ್ವ ಇವರಿಗೆ ಇಬ್ಬರು ಮಕ್ಕಳಿದ್ದು, ಅವರ ಹೆಸರುಗಳು ಗಂಗವ್ವ ಮತ್ತು ಮುತ್ತವ್ವ ಇರುತ್ತವೆ. ಸದರಿ ಗಂಗವ್ವ ಮತ್ತು ಮುತ್ತವ್ವ ಇವರುಗಳು ಗಂಡನ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿ ಗಂಗವ್ವ ಇವರಿಗೆ ಒಬ್ಬ ಮಗಳಿದ್ದು, ಆಕೆಯ ಹೆಸರು ತಿಪ್ಪವ್ವ ಇರುತ್ತದೆ. ಸದರಿ ಮುತ್ತವ್ವ ಇವರಿಗೆ ಇಬ್ಬರು ಮಕ್ಕಳಿದ್ದು , ಅವರ ಹೆಸರುಗಳು ಮಾಳಪ್ಪ ಮತ್ತು ಯಲ್ಲಪ್ಪ ಇರುತ್ತವೆ. ಸದರಿಯವರು ಈಗ ಜೀವಂತ ಇರುತ್ತಾರೆ.

2. ಸದರಿ ಕೆಂಚಪ್ಪ ಇವರ 2 ನೇ ಹೆಂಡತಿ ಸಿದ್ದವ್ವ ನನ್ನ ತಾಯಿ ಎಂದರೆ ಸರಿ. ನನ್ನ ತಾಯಿಗೆ ನನ್ನನ್ನು ಸೇರಿಸಿ ಒಟ್ಟು ಐದು ಜನ ಮಕ್ಕಳು ಇರುತ್ತಾರೆ. ಅವರೆಂದರೆ ಯಲ್ಲವ್ವ, ಸತ್ಯವ್ವ, ನಿಂಬೆವ್ವ, ಸಾಯವ್ವ ಮತ್ತು ನಾನು.

3. ಸದರಿ ಕೆಂಚಪ್ಪ ಇವರ 3 ನೇ ಹೆಂಡತಿ ಶಿಬಾಯಿ ಇವರಿಗೆ 7 ಜನ ಮಕ್ಕಳಿದ್ದು, ಅವರುಗಳೆಂದರೆ ಕಸ್ತೂರಿ, ನೀಲವ್ವ, ದೊಡ್ಡವ್ವ, ಕಾಶಿರಾಯ, ಗುರಪ್ಪ, ಶಿವಪ್ಪ ಮತ್ತು ಹನಮಂತ ಇರುತ್ತಾರೆ.

4. ನನ್ನ ನಾಲ್ಕು ಜನ ಸಹೋದರಿಯರು ಜೀವಂತ ಇರುತ್ತಾರೆ. ಸದರಿ ಶಿಬಾಯಿ ಇವರ ಎಲ್ಲಾ 7 ಜನ ಮಕ್ಕಳು ಜೀವಂತ ಇರುತ್ತಾರೆ. ನನ್ನ ತಂದೆ ಕೆಂಚಪ್ಪ ಇವರು ನನ್ನ ಕಾಕಾ ಸತ್ಯಪ್ಪ ತಂದೆ ರಾಮಪ್ಪ ಕಡಪಟ್ಟಿ ಇವರ ವಿರುದ್ಧ ಜಮಖಂಡಿ ನ್ಯಾಯಾಲಯದಲ್ಲಿ ಒಂದು ದಾವೆ ಸಲ್ಲಿಸಿದ್ದ ಎಂದರೆ ಸರಿ. ಸದರಿ ದಾವೆಯ ಸಂಖ್ಯೆ ಓ.ಎಸ್. ಸಂ.52/1982 ಎಂದರೆ ಸರಿ. ಪ್ರಸ್ತುತ ದಾವೆಯ 1 ನೇ ಪ್ರತಿವಾದಿ ಸಂಗಪ್ಪ ಇವರು ನನ್ನ ತಂದೆ, ಚಿಕ್ಕಪ್ಪನಾದ ಸತ್ಯಪ್ಪ ತಂದೆ ರಾಮಪ್ಪ ಕಡಪಟ್ಟಿ ಮತ್ತು ಲಕ್ಷ್ಮಣ ತಂದೆ ಭರಮಪ್ಪ ನಿಡೋಣಿ ಇವರ ವಿರುದ್ಧ ಓ.ಎಸ್. ನಂ.47/1980 ದಾವೆ ಸಲ್ಲಿಸಿದ್ದರು ಎಂದರೆ ಸರಿ. ನನ್ನ ತಂದೆ ಸಲ್ಲಿಸಿದ ದಾವೆ ವಜಾಗೊಂಡಿರುತ್ತದೆ ಎಂದರೆ ಸರಿ. ಪ್ರಸ್ತುತ ದಾವೆಯ 1 ನೇ ಪ್ರತಿವಾದಿ ಸಲ್ಲಿಸಿದ ದಾವೆಯಲ್ಲಿ ಆತನ ಪರವಾಗಿ ತೀರ್ಪು ಬಂದಿರುತ್ತದೆ ಎಂದರೆ ಸರಿ.

5. ಸದರಿ ದಾವೆಗಳ ತೀರ್ಪುಗಳ ವಿರುದ್ಧ ನನ್ನ ತಂದೆ ಎರಡು ಅಪೀಲುಗಳನ್ನು ಮಾಡಿದ್ದರು ಎಂದರೆ ಸರಿ. ಸದರಿ ಎರಡು ಅಪೀಲುಗಳು ವಜಾಗೊಂಡಿರುತ್ತವೆ ಎಂದರೆ ಸರಿ. ಸದರಿ ಅಪೀಲುಗಳಲ್ಲಿ ಆದ ತೀರ್ಪಿಗಳ ವಿರುದ್ಧ ನನ್ನ ತಂದೆಯಾಗಲಿ, ನಾನಾಗಲಿ, ನನ್ನ ಚಿಕ್ಕಪ್ಪನಾಗಲಿ ಅಥವಾ ನನ್ನ ಕುಟುಂಬದ ಸದಸ್ಯರಾಗಲಿ ಅಪೀಲು ಮಾಡಿರುವುದಿಲ್ಲ.

6. ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಿದ್ಧಪಡಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಕೆಂಚಪ್ಪ ಮತ್ತು ಪ್ರಸ್ತುತ ದಾವೆಯ 1 ನೇ ಪ್ರತಿವಾದಿಯ ಮಧ್ಯೆ ಕರಾರು ಆಗಿತ್ತು ಎಂದು ನಾನು ಬರೆಸಿಲ್ಲ. ನನ್ನ ಚಿಕ್ಕಪ್ಪನಾದ ಸತ್ಯಪ್ಪ ತಂದೆ ರಾಮಪ್ಪ ಕಡಪಟ್ಟಿ ಮತ್ತು ಪ್ರಸ್ತುತ ದಾವೆಯ 1 ನೇ ಪ್ರತಿವಾದಿಯ ಮಧ್ಯೆ ಕರಾರು ಆಗಿತ್ತು ಎಂದು ನಾನು ಬರೆಸಿಲ್ಲ. ನನ್ನ ತಂದೆ ಕೆಂಚಪ್ಪ ಇವರು ಸದರಿ ಸತ್ಯಪ್ಪ ಇವರಿಗೆ ಬರೆದುಕೊಟ್ಟಿರುವ ಕ್ರಯ ಪತ್ರ ಮತ್ತು ಸದರಿ ಸತ್ಯಪ್ಪ ಇವರು ಪ್ರಸ್ತುತ ದಾವೆಯ 1 ನೇ ಪ್ರತಿವಾದಿ ಸಂಗಪ್ಪ ಇವರಿಗೆ ಬರೆದುಕೊಟ್ಟಿರುವ ಕ್ರಯ ಪತ್ರ, ಅವುಗಳನ್ನು

ನಾನು ಯಾವುದೇ ನ್ಯಾಯಾಲಯಗಳ ಮುಂದೆ ಪ್ರಶ್ನಿಸಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಹಾಗೂ ನನ್ನ ತಂದೆಯ ಮಧ್ಯೆ ಕಬ್ಜೆಗೆ ಸಂಬಂಧಿಸಿದಂತೆ ಯಾವುದೇ ಕರಾರು ಆಗಿರಲಿಲ್ಲ.

7. ಗೋಠೆ ಗ್ರಾಮದ ಸರ್ವೆ ನಂ.38 ಜಮೀನಿನಲ್ಲಿ ನನ್ನ ತಂದೆ ಸದರಿ ಸತ್ಯಪ್ಪ ಇವರಿಗೆ 8 ಎಕರೆ 18 ಗುಂಟೆ ಜಮೀನನ್ನು ಮಾರಾಟ ಮಾಡಿದ ನಂತರ ಇನ್ನೂ ಸ್ವಲ್ಪ ಜಮೀನು ಉಳಿದಿತ್ತು ಎಂದರೆ ಸರಿ. ಸದರಿ ಉಳಿದ ಜಮೀನು ಅಂದಾಜು 6 ಎಕರೆ ಇತ್ತು. ಸದರಿ 6 ಎಕರೆ ಜಮೀನಿನ ಪಹಣಿ ಪತ್ರಿಕೆಯಲ್ಲಿ ನನ್ನ ತಮ್ಮನಾದ ಕಾಶಿರಾಯ ತಂದೆ ಕೆಂಚಪ್ಪ ಕಡಪಟ್ಟಿ ಮತ್ತು ಆತನ ಹೆಂಡತಿಯಾದ ಸುಮಿತ್ರಾ ಗಂಡ ಕಾಶಿರಾಯ ಕಡಪಟ್ಟಿ ಇವರ ಹೆಸರುಗಳು ಮಾತ್ರ ಇರುತ್ತವೆ. ದಾವಾ ಜಮೀನಿನ ಪಹಣಿ ಪತ್ರಿಕೆಗಳಲ್ಲಿ ಮೊದಲು 1 ನೇ ಪ್ರತಿವಾದಿಯ ಹೆಸರು ಇದ್ದು, ಈಗ ಆತನ ಮಕ್ಕಳ ಹೆಸರುಗಳು ನಮೂದು ಇರುತ್ತವೆ ಎಂದರೆ ಸರಿ. ಸದರಿ 6 ಎಕರೆ ಜಮೀನಿನಲ್ಲಿ ಒಂದು ಮನೆ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾನು ಮನೆ ಕಟ್ಟಿರುತ್ತೇನೆ, ಸದರಿ ಮನೆ ಕಟ್ಟಲು ಪಂಚಾಯತಿಯಿಂದ ಪರವಾನಿಗೆ ಪಡೆದಿಲ್ಲ. ಸದರಿ ಮನೆಗೆ ಸಂಬಂಧಿಸಿದಂತೆ ತೆರಿಗೆ ನಿಗದಿಪಡಿಸಲು ನಾನು ಅರ್ಜಿ ನೀಡಿಲ್ಲ. ಸದರಿ ಮನೆ ಕಟ್ಟಿಸಲು ನಾನು ಕಬ್ಬಿಣ ರಾಡ್, ಸೀಮೆಂಟ್ ಮತ್ತು ಇತರೆ ಕಟ್ಟಡ ಸಾಮಗ್ರಿಗಳನ್ನು ತಂದಿದ್ದು, ಅವುಗಳ ಪೈಕಿ ಕಬ್ಬಿಣ ರಾಡ್ ಬಿಲ್ ಮಾತ್ರ ಇರುತ್ತದೆ.

8. ಸತ್ಯಪ್ಪ ತಂದೆ ರಾಮಪ್ಪ ಕಡಪಟ್ಟಿ ಇವರ ಜಮೀನಿನ ಮೂಲಕ ಹಾಯ್ದು ದಾವಾ ಜಮೀನಿಗೆ ಹೋಗಿ ಬಂದು ಮಾಡುತ್ತೇನೆ. ಸದರಿ ಸತ್ಯಪ್ಪ ತಂದೆ ರಾಮಪ್ಪ ಕಡಪಟ್ಟಿ ಇವರ ಜಮೀನು ದಾವಾ ಜಮೀನಿನ ದಕ್ಷಿಣ ದಿಕ್ಕಿನ ಕಡೆಗೆ ಇರುತ್ತದೆ. ಸದರಿ ಸತ್ಯಪ್ಪ ತಂದೆ ರಾಮಪ್ಪ ಕಡಪಟ್ಟಿ ಇವರು ತಮ್ಮ ಜಮೀನಿನಲ್ಲಿ ಮನೆ ಮಾಡಿ ಅಲ್ಲಿಯೇ ವಾಸಿಸುತ್ತಾರೆ.

9. ನಾನು ಮೊದಲಿನಿಂದಲೂ ದಾವಾ ಜಮೀನಿನ ಕಬ್ಜೆಯಲ್ಲಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸುಮಾರು 40 ವರ್ಷಗಳಿಂದ ಕಬ್ಜೆಯಲ್ಲಿ ಇದ್ದೇನೆ ಎಂದು ಸ್ವತಃ ನುಡಿಯುತ್ತಾರೆ. ನನ್ನ ತಂದೆ ಕೆಂಚಪ್ಪ ದಾವಾ ಜಮೀನನ್ನು ಸದರಿ ಸತ್ಯಪ್ಪ ತಂದೆ ರಾಮಪ್ಪ ಕಡಪಟ್ಟಿ ಇವರಿಗೆ ಮಾರಾಟ ಮಾಡಿದ ದಿನದಂದು ಕಬ್ಜೆ ಹಸ್ತಾಂತರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಸದರಿ ಸತ್ಯಪ್ಪ ತಂದೆ ರಾಮಪ್ಪ ಕಡಪಟ್ಟಿ ಇವರು ದಾವಾ ಜಮೀನನ್ನು ಪ್ರಸ್ತುತ ದಾವೆಯ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, ಅದೇ ದಿನ ಕಬ್ಜೆಯನ್ನು ಸಹ ಹಸ್ತಾಂತರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ದಾವಾ ಸ್ವತ್ತನ್ನು ಮಾರಾಟ ಮಾಡಿದ ದಿನದಿಂದ ನಾನಾಗಲಿ ನನ್ನ ಕುಟುಂಬದವರಾಗಲಿ ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸತ್ಯಪ್ಪ ಇವರು ದಾವಾ ಜಮೀನಿನ ಕಬ್ಜೆಯನ್ನು ನನ್ನ ತಂದೆ ಕೆಂಚಪ್ಪ ಇವರಿಗೆ ದಾವಾ ಸ್ವತ್ತಿನ ಒಡೆತನ ಮತ್ತು ಕಬ್ಜೆಯನ್ನು ಮರು ಹಸ್ತಾಂತರಿಸುವ ಕುರಿತು ನನ್ನ ತಂದೆ ಹಾಗೂ ಸದರಿ ಸತ್ಯಪ್ಪ ತಂದೆ ರಾಮಪ್ಪ ಕಡಪಟ್ಟಿ ಇವರ ಮಧ್ಯೆ ಕರಾರು ಆಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 01-04-1996 ರಂದು ನನ್ನ ತಂದೆ ದಾವಾ ಜಮೀನಿನ ಕಬ್ಜೆಯನ್ನು ನನಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. 2004 ಮತ್ತು 2021 ರಲ್ಲಿ ನಾನು ದಾವಾ ಜಮೀನಿನಲ್ಲಿ ಮನೆಗಳನ್ನು ಕಟ್ಟಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ವ್ಯವಸಾಯವನ್ನು ನಾವೇ ಮಾಡುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಮತ್ತು ದಾವಾ ಸ್ವತ್ತನ್ನು ಕಬಳಿಸಬೇಕೆಂಬ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಖರೀದಿಸಿದ ದಿನದಿಂದ

ಇಲ್ಲಿಯವರೆಗೂ ದಾವಾ ಸ್ವತ್ತಿನಲ್ಲಿ ಅವರೇ ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ.

11. ನನ್ನ ತಂದೆಯ ಉಳಿದ ಇಬ್ಬರು ಹೆಂಡತಿಯರ ಮಕ್ಕಳನ್ನು ಮತ್ತು ನನ್ನ ಸಹೋದರಿಯರನ್ನು ಪ್ರಸ್ತುತ ದಾವೆಯಲ್ಲಿ ಸೇರಿಸದೆ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿಯವರು ಪ್ರತಿವಾದಿಯರಿಗೆ ಅನುಕೂಲ ಮಾಡಿಕೊಡುತ್ತಾರೆ ಎಂದು ತಿಳಿದು ಅವರನ್ನು ಪ್ರಸ್ತುತ ದಾವೆಯಲ್ಲಿ ನಾನು ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸುಮಾರು 12 ವರ್ಷಗಳಿಗಿಂತ ಹೆಚ್ಚು ನಾನು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರೊಂದಿಗೆ ಶಾಮೀಲಾಗಿ ಪ್ರತಿವಾದಿಯ ವಿರುದ್ದ ಸುಳ್ಳು ಕ್ರಿಮಿನಲ್ ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

Sd/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ